ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

"ವಾರ್ತಾಸೌಧ", # 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು 560 001. ದೂರವಾಣಿ 080-22028006, ಫ್ಯಾಕ್ಸ್ 22863794

ಸಂ: ವಾಸಾಸಂಇ/ಭಾಚಿವಿ/ಜ.ಚಿ.ಅ/2016-17/ ದಿನಾಂಕ: 31-12-2016

**ಜನತಾ ಚಿತ್ರಮಂದಿರ ನಿರ್ಮಾಣಕ್ಕೆ ಪ್ರೋತ್ಸಾಹಧನ ಪಡೆಯಲು ನೊಂದಣಿ ಅರ್ಜಿ**

| ಕ್ರ.ಸಂ. | ವಿವರಗಳು | | |
|---|---|---|---|
| 1 | ವ್ಯಕ್ತಿಯ / ಸಂಸ್ಥೆಯ/<br>ಸರ್ಕಾರಿ ಒಡೆತನದ ಸಂಸ್ಥೆ ಹೆಸರು. | | |
| 2 | ವಿಳಾಸ. | | |
| 3 | ಸ್ಥಿರ ದೂರವಾಣಿ ಸಂ:<br>ಮೊಬೈಲ್ ಸಂ.: | | |
| 4 | ಈ-ಮೇಲ್ : | | |
| 5 | ಹೊಸದಾಗಿ ನಿರ್ಮಾಣವಾಗುವ ಚಿತ್ರಮಂದಿರವೇ/<br>ನವೀಕರಿಸುವ ಚಿತ್ರಮಂದಿರವೇ. | | |
| 6 | ಹೊಸದಾಗಿ ನಿರ್ಮಾಣವಾಗುವ ಚಿತ್ರಮಂದಿರವಾಗಿದ್ದಲ್ಲಿ : | | |
| | A | ಉದ್ದೇಶಿತ ನಿವೇಶನದ (ದಾಖಲಾತಿಗಳನ್ನು ಲಗತ್ತಿಸುವುದು) | |
| | | 1) ಅಳತೆ | |
| | | 2) ವಿಳಾಸ | |
| | B | 1) ಸ್ವಂತ ನಿವೇಶನ<br>2) ಗುತ್ತಿಗೆ ಆಧಾರದ ನಿವೇಶನ | |
| | C | ಒಡೆತನ<br>1) ಸ್ವಂತ ಒಡೆತನ<br>2) ಪಾಲುದಾರಿಕೆ<br>3) ಸರ್ಕಾರಿ ಒಡೆತನ | |
| | D | ಉದ್ದೇಶಿತ ಚಿತ್ರಮಂದಿರ<br>ಏಕಪರದೆಯೇ/ಬಹುಪರದೆಯೇ | |
| 7 | ನವೀಕರಿಸುವ ಚಿತ್ರಮಂದಿರವಾಗಿದ್ದಲ್ಲಿ: (ದಾಖಲಾತಿಗಳನ್ನು ಲಗತ್ತಿಸುವುದು) | | |
| | A | ಹಾಲಿ ಚಿತ್ರಮಂದಿರದ ಹೆಸರು /ವಿಳಾಸ | |
| | B | ಸ್ವಂತ ಒಡೆತನ / ಪಾಲುದಾರಿಕೆ | |
| | C | ಏಕಪರದೆಯಿಂದ ಏಕಪರದೆಗೆ ನವೀಕರಣವೇ ಅಥವಾ ಬಹುಪರದೆಗೆ ನವೀಕರಣವೇ | |

| | | |
|---|---|---|
| 8 | ಚಲನಚಿತ್ರ ನಿರ್ಮಾಣ/ವಿತರಣೆ/ಪ್ರದರ್ಶನ ಕ್ಷೇತ್ರದಲ್ಲಿ ಅನುಭವ ಹೊಂದಿರುವ ಬಗ್ಗೆ ವಿವರ. | |
| 9 | ಸದೃಡ ಹಣಕಾಸಿನ ಸ್ಥಿತಿಗತಿ ಹಾಗೂ ಹಿನ್ನೆಲೆ ಹೊಂದಿರುವ ಕಂಪನಿ ಪ್ರವರ್ತಕರಾಗಿದ್ದಲ್ಲಿ ವಿವರಗಳು. | |
| 10 | ಚಿತ್ರಮಂದಿರವನ್ನು ಎಷ್ಟು ದಿನಗಳಲ್ಲಿ ಪೂರ್ಣಗೊಳಲಾಗುವುದು. | |
| 11 | ಮಿತವ್ಯಯಕಾರಿ ಬಾಕ್ಸ್ ಆಫೀಸ್ ಟಿಕೆಟಿಂಗ್, ಆನ್ ಲೈನ್ ಟಿಕೆಟ್ ಮತ್ತು ಗಳಿಕೆಯ ಸ್ವಯಂ ಚಾಲಿತ ವರದಿ ಹಾಗೂ ತೆರಿಗೆ ಸಂದಾಯ ವ್ಯವಸ್ಥೆ ರೂಪಿಸುವ ಬಗ್ಗೆ ಮಾಹಿತಿ. | |

## ದೃಢೀಕರಣ

ಈ ಅರ್ಜಿ ನಮೂನೆಯಲ್ಲಿ ನಮೂದಿಸಿರುವ ಎಲ್ಲಾ ವಿವರಗಳು ಹಾಗೂ ಲಗತ್ತಿಸಿರುವ ದಾಖಲಾತಿಗಳು ಸತ್ಯವಾಗಿರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ: ಸಹಿ:
ಸ್ಥಳ: ಹೆಸರು:

**ಜನತಾ ಚಿತ್ರಮಂದಿರ ಪ್ರೋತ್ಸಾಹಧನ ಮಂಜೂರಾತಿಗೆ ಮಾರ್ಗಸೂಚಿಗಳು:-**

1: ಜನತಾ ಚಿತ್ರಮಂದಿರವನ್ನು ಹೊಸದಾಗಿ ನಿರ್ಮಿಸಲು ಇಚ್ಛಿಸುವವರು ಅಥವಾ ಹಾಲಿ ಚಿತ್ರಮಂದಿರವನ್ನು ಜನತಾ ಚಿತ್ರಮಂದಿರವಾಗಿ ಪರಿವರ್ತಿಸಲು ಇಚ್ಛಿಸುವವರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನಿರ್ದೇಶಕರ ಕಛೇರಿಯಲ್ಲಿ ನೋಂದಣಿ ಮಾಡಿಸಿಕೊಳ್ಳಬೇಕು.

2: ರಾಜ್ಯದ ಯಾವುದೇ ಭಾಗದಲ್ಲಿ ಕನಿಷ್ಟ 200 ಆಸನಗಳುಳ್ಳ , ಏಕಪರದೆಯ ಅಥವಾ ಕನಿಷ್ಟ 150 ಆಸನಗಳನ್ನು ಒಳಗೊಂಡ ಬಹುಪರದೆಯ ಆಧುನಿಕ ತಂತ್ರಜ್ಞಾನ ಸೌಲಭ್ಯಗಳನ್ನು ಒಳಗೊಂಡ ಚಿತ್ರಮಂದಿರಗಳನ್ನು ನಿರ್ಮಿಸಿ, ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಂದ ನಿರಾಕ್ಷೇಪಣಾ ಪತ್ರವನ್ನು ಪಡೆದು ಪೂರ್ಣ ಪ್ರಮಾಣದಲ್ಲಿ ಪ್ರದರ್ಶನಕ್ಕೆ ಮುಕ್ತಗೊಳಿಸಿದ ಚಿತ್ರಮಂದಿರಗಳು ಪ್ರೋತ್ಸಾಹಧನಕ್ಕೆ ಅರ್ಹತೆ ಹೊಂದಿರುತ್ತವೆ.

3: ಚಿತ್ರಮಂದಿರವನ್ನು ಸ್ವಂತ ನಿವೇಶನದಲ್ಲಿ ನಿರ್ಮಿಸಬಹುದು ಅಥವಾ ಗುತ್ತಿಗೆ ಆಧಾರದ ಮೇಲೆ ಜಮೀನನ್ನು ಪಡೆದು ನಿರ್ಮಿಸಬಹುದು. ಸ್ವಂತ ಒಡೆತನದಲ್ಲಿ ಅಥವಾ ಪಾಲುದಾರಿಕೆಯಲ್ಲಿ ನಿರ್ಮಿಸಬಹುದು. ಸರ್ಕಾರಿ ಒಡೆತನದ ಸಂಸ್ಥೆಗಳಿಗೂ ಈ ಸೌಲಭ್ಯವನ್ನು ವಿಸ್ತರಿಸಬಹುದು.

4: ಜನತಾ ಚಿತ್ರಮಂದಿರವನ್ನು ಹೊಸದಾಗಿ ನಿರ್ಮಿಸಿರಬೇಕು. ಇದಕ್ಕೆ ಪೂರಕವಾಗಿ ಅಳವಡಿಸುವ ತಾಂತ್ರಿಕ ಪರಿಕರಗಳು, ಪೀಠೋಪಕರಣಗಳು ಹಾಗೂ ಇತರೆ ಸಲಕರಣೆಗಳನ್ನು ಅಧಿಕೃತ ಮಾರಾಟಗಾರರಿಂದ ಹೊಸದಾಗಿ ಪಡೆದು ಅಳವಡಿಸಿರತಕ್ಕದ್ದು.

5: ಜನತಾ ಚಿತ್ರಮಂದಿರ ನಿರ್ಮಾಣಕ್ಕೆ ಸರ್ಕಾರದಿಂದ ಪ್ರೋತ್ಸಾಹಧನ ಪಡೆದ ಚಿತ್ರಮಂದಿರಗಳಲ್ಲಿ, ಪ್ರೋತ್ಸಾಹಧನ ಪಡೆದ ದಿನದಿಂದ ಶೇಕಡ 100 ರಷ್ಟು ಕನ್ನಡ ಚಲನಚಿತ್ರಗಳನ್ನು ಮಾತ್ರ ಪ್ರದರ್ಶಿಸತಕ್ಕದ್ದು.

6: ಸರ್ಕಾರದಿಂದ ಪ್ರೋತ್ಸಾಹಧನ ಪಡೆದ ಜನತಾ ಚಿತ್ರಮಂದಿರಗಳು ಕಡ್ಡಾಯವಾಗಿ ಕನ್ನಡ ಚಲನಚಿತ್ರಗಳನ್ನು ಪ್ರದರ್ಶಿಸದೇ ಇದ್ದಲ್ಲಿ ಸರ್ಕಾರವು ಮಂಜೂರು ಮಾಡಿದ ಪ್ರೋತ್ಸಾಹಧನವನ್ನು ದಂಡಶುಲ್ಕದೊಂದಿಗೆ ಸರ್ಕಾರಕ್ಕೆ ಹಿಂತಿರುಗಿಸತಕ್ಕದ್ದು. ಇದಕ್ಕೆ ಒಪ್ಪಿಗೆ ಪತ್ರವನ್ನು ರೂ 100 ಮೌಲ್ಯದ ಛಾಪಾಕಾಗದದಲ್ಲಿ ಚಿತ್ರಮಂದಿರದ ಮಾಲೀಕರು ಸಲ್ಲಿಸತಕ್ಕದ್ದು.

7: ಸರ್ಕಾರದ ಪ್ರೋತ್ಸಾಹಧನ ಪಡೆದು ನಿರ್ಮಿಸಿದ ಚಿತ್ರಮಂದಿರವನ್ನು ಕನ್ನಡ ಚಲನಚಿತ್ರ ಪ್ರದರ್ಶನ ಹೊರತುಪಡಿಸಿ ಇತರೆ ಯಾವುದೇ ಉದ್ದೇಶಕ್ಕೆ ಬಳಸತಕ್ಕದ್ದಲ್ಲ.

8: ಜನತಾ ಚಿತ್ರಮಂದಿರ ನಿರ್ಮಾಣದ ನಂತರ ಪ್ರೋತ್ಸಾಹಧನ ಪಡೆದ ಮಾಲೀಕರು ನಿವೇಶನ / ಜಮೀನನ್ನು ಅಥವಾ ಚಿತ್ರಮಂದಿರವನ್ನು ಬೇರೆಯವರಿಗೆ ಮಾರಾಟ / ವರ್ಗಾವಣೆ / ಪರಭಾರೆ ಮಾಡಿದಲ್ಲಿ ಖರೀದಿದಾರರು ಸಹ ಸದರಿ ಜನತಾ ಚಿತ್ರಮಂದಿರವನ್ನು ಕನ್ನಡ ಚಲನಚಿತ್ರ ಪ್ರದರ್ಶನಕ್ಕೆ ಮಾತ್ರ ಮೀಸಲಿಡತಕ್ಕದ್ದು.

9: ಹೊಸದಾಗಿ ನಿರ್ಮಾಣವಾಗುವ ಏಕಪರದೆ ಚಿತ್ರಮಂದಿರಗಳಿಗೆ ಗರಿಷ್ಟ ರೂ.50.00 ಲಕ್ಷ ಪ್ರೋತ್ಸಾಹಧನ ನೀಡಲಾಗುವುದು.

10: ಈಗಾಗಲೇ ಚಾಲ್ತಿಯಲ್ಲಿರುವ ಸಾಮಾನ್ಯ ಚಿತ್ರಮಂದಿರ/ ಏಕಪರದೆಯ ಚಿತ್ರಮಂದಿರವನ್ನು ಬಹುಪರದೆಯ ಚಿತ್ರಮಂದಿರವನ್ನಾಗಿ ಮಾರ್ಪಡಿಸಿದ್ದಲ್ಲಿ, ಮೂಲ ಪರದೆಯನ್ನು ಹೊರತುಪಡಿಸಿ, ಹೊಸದಾಗಿ ನಿರ್ಮಾಣವಾಗುವ ಪ್ರತಿ ಪರದೆಗೂ ಗರಿಷ್ಟ ರೂ.25.00ಲಕ್ಷಗಳ ಪ್ರೋತ್ಸಾಹಧನ ನೀಡಲಾಗುವುದು.

11: ಹೊಸದಾಗಿ ನಿರ್ಮಾಣವಾಗುವ ಬಹುಪರದೆ ಚಿತ್ರಮಂದಿರಗಳಿಗೆ ಪ್ರತಿ ಪರದೆಗೂ ಗರಿಷ್ಟ ರೂ.50.00ಲಕ್ಷಗಳ ಪ್ರೋತ್ಸಾಹಧನ ನೀಡಲಾಗುವುದು. ಗರಿಷ್ಠ 2 ಪರದೆಗಳಿಗೆ ಮಾತ್ರ ಈ ಸೌಲಭ್ಯ ವಿಸ್ತರಿಸಲಾಗುವುದು.

12: ಸರ್ಕಾರದ ಆದೇಶದ ದಿನಾಂಕದಿಂದ ಹಿಂದಿನ ದಿನಾಂಕಗಳಲ್ಲಿ ನಿರ್ಮಿಸಿದ ಚಿತ್ರಮಂದಿರಗಳಿಗೆ ಈ ಪ್ರೋತ್ಸಾಹಧನ ಯೋಜನೆ ಅನ್ವಯಿಸುವುದಿಲ್ಲ.

13: ಒಂದು ಚಿತ್ರಮಂದಿರಕ್ಕೆ ಒಂದು ಬಾರಿ ಮಾತ್ರ ಸಹಾಯಧನ ಮಂಜೂರು ಮಾಡಲಾಗುವುದು.

14: ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖಾ ನಿರ್ದೇಶಕರು ರಚಿಸುವ ಪರಿಶೀಲನಾ ತಂಡದ ಶಿಫಾರಸ್ಸು ಆಧರಿಸಿ ಪ್ರೋತ್ಸಾಹಧನ ಬಿಡುಗಡೆ ಮಾಡುವುದು.

15: ಚಲನಚಿತ್ರ ನಿರ್ಮಾಣ/ವಿತರಣೆ/ಪ್ರದರ್ಶನ ಕ್ಷೇತ್ರದಲ್ಲಿ ಅನುಭವ ಹೊಂದಿದವರಿಗೆ ಹಾಗೂ ಚಿತ್ರಮಂದಿರ/ಜನತಾ ಚಿತ್ರಮಂದಿರ ವ್ಯವಹಾರದಲ್ಲಿ ತೊಡಗಿಸಿಕೊಂಡಿರುವವರಿಗೆ ಆದ್ಯತೆ ನೀಡಲಾಗುವುದು.

16: ಸದೃಢ ಹಣಕಾಸಿನ ಸ್ಥಿತಿಗತಿ ಹಾಗೂ ಹಿನ್ನೆಲೆ ಹೊಂದಿರುವ ಕಂಪನಿ ಅಥವಾ ಪ್ರವರ್ತಕರಿಗೆ ಆದ್ಯತೆ ನೀಡಲಾಗುವುದು.

17: ಈ ಚಿತ್ರಮಂದಿರಗಳನ್ನು ಸ್ಥಳೀಯ ಸಾಮಾಜಿಕ ಆರ್ಥಿಕ ಅಭಿವೃದ್ಧಿಗೆ ಪೂರಕವಾದ ಚಟುವಟಿಕೆಯ ಕೇಂದ್ರವೆಂದು ಪರಿಗಣಿಸಲಾಗುವುದು. ಬಹು ಉದ್ದೇಶಿತ ಸೌಕರ್ಯಗಳನ್ನು ಹೊಂದಿರುವ ಚಿತ್ರಮಂದಿರಗಳನ್ನು ನಿರ್ಮಿಸುವವರಿಗೆ ಆದ್ಯತೆ ನೀಡಲಾಗುವುದು.

18: ಚಿತ್ರಮಂದಿರವನ್ನು ತ್ವರಿತ ಗತಿಯಲ್ಲಿ ಪೂರ್ಣಗೊಳಿಸುವ ಸಾಮರ್ಥ್ಯ ಹೊಂದಿದವರಿಗೆ ( 90 ರಿಂದ 120 ದಿನಗಳು) ಆದ್ಯತೆ ನೀಡಲಾಗುವುದು.

19: ಚಿತ್ರಮಂದಿರಗಳನ್ನು ಪಾರದರ್ಶಕವಾಗಿ ಹಾಗೂ ದಕ್ಷತೆಯಿಂದ ನಿರ್ವಹಿಸುವ ಸಾಮರ್ಥ್ಯವನ್ನು ಅರ್ಜಿದಾರರು ಹೊಂದಿರಬೇಕು. ಮಿತವ್ಯಯಕಾರಿ ಬಾಕ್ಸ್ ಆಫೀಸ್ ಟಿಕೆಟಿಂಗ್, ಆನ್ ಲೈನ್ ಟಿಕೆಟ್ ಮತ್ತು ಗಳಿಕೆಯ ಸ್ವಯಂ ಚಾಲಿತ ವರದಿ ಹಾಗೂ ತೆರಿಗೆ ಸಂದಾಯ ವ್ಯವಸ್ಥೆ ರೂಪಿಸುವುದು ಅಪೇಕ್ಷಣಿಯ.

* ******